ಸಿವಿಲ್ ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ,
ಹಗರಿಬೊಮ್ಮನಹಳ್ಳಿ

ಸಿ ಸಿ ನಂ.424/2022

ಸಾಕ್ಷಿಗೆ ದಿನಾಂಕ 24-01-2026 ರಂದು ಪ್ರಮಾಣ ವಚನ ಭೋದಿಸಲಾಯಿತು.

C.W.: 8 P.W.: 6

| | | |
|---|---|---|
| ಹೆಸರು | : | ರಾಜೇಶನಾಯ್ಕ |
| ತಂದೆಯ ಹೆಸರು | : | ವೆಂಕಟೇಶನಾಯ್ಕ |
| ವಯಸ್ಸು | : | 36 ವರ್ಷ |
| ಉದ್ಯೋಗ | : | ವೈದ್ಯಾಧಿಕಾರಿಗಳು |
| ವಾಸ ಸ್ಥಳ | : | ಕೊಟ್ಟೂರು |

ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ-

ನಾನು ಪೆಬ್ರವರಿ 2022 ರಿಂದ ಇಟಗಿ ಆರೋಗ್ಯ ಕೇಂದ್ರದಲ್ಲಿ ವೈಧ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ಚಾಸಾ-4 ರವರು ದಿಃ 02-04-2022 ರಂದು ಬೆಳಿಗ್ಗೆ 10 ಗಂಟೆ ಸಮಯದಲ್ಲಿ ಆಸ್ಪತ್ರೆಗೆ ಚಿಕಿತ್ಸೆಗಾಗಿ ಬಂದಿದ್ದರು. ಅವರಿಗೆ ಪರೀಕ್ಷಿಸಿ ನೋಡಲಾಗಿ ಯಾವುದೇ ಗಾಯಗಳು ಇರಲಿಲ್ಲ ಅವರಿಗೆ ಮೈಕೈ ನೋವಿದೆ ಅಂತಾ ತಿಳಿಸಿದ್ದರು ಅದರಂತೆ ನಾನು ಅವರಿಗೆ ಚಿಕಿತ್ಸೆಯನ್ನು ನೀಡಿರುತ್ತೇನೆ. ಆ ಸಂಬಂಧ ನಾನು ಪ್ರಮಾಣಪತ್ರವನ್ನು ನೀಡಿದ್ದು ಅದನ್ನು ನೊಡಿದರೆ ಗುರುತಿಸುತ್ತೇನೆ ಸಾಕ್ಷಿಯು ಸದರಿ ದಾಖಲೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-7 ಎಂದು ಮತ್ತು ಸಹಿಯನ್ನು 7 ಎ ಎಂದು ಗುರುತಿಸಲಾಯಿತು.

ಅದೇ ಸಮಯದಲ್ಲಿ ಚಾಸಾ-1 ರವರು ಸಹಾ ಆಸ್ಪತ್ರೆಗೆ ಚಿಕಿತ್ಸೆಗಾಗಿ ಬಂದಿದ್ದು ಅವರಿಗೆ ಪರೀಕ್ಷಿಸಿ ನೋಡಿರುತ್ತೇನೆ ಅವರೂ ಸಹಾ ತನಗೆ ಮೈಕೈ ನೋವಿದೆ ಅಂತಾ ತಿಳಿಸಿದ್ದರು ಅದರಂತೆ ನಾನು ಅವರಿಗೆ ಚಿಕಿತ್ಸೆಯನ್ನು ನೀಡಿರುತ್ತೇನೆ. ಅವರಿಗೆ ಯಾವುದೇ ಗಾಯಗಳಾಗಿರಲಿಲ್ಲ. ಅವರು ಗಲಾಟೆಯಲ್ಲಿ ಗಾಯವಾಗಿದೆ ಅಂತಾ ಚಿಕಿತ್ಸೆಗಾಗಿ ಬಂದಿದ್ದರು. ಚಾಸಾ-1 ರವರಿಗೆ ಚಿಕಿತ್ಸೆ ನೀಡಿದ ಬಗ್ಗೆ ಪ್ರಮಾಣಪತ್ರವನ್ನು ನೀಡಿದ್ದು ಅದನ್ನು ನೊಡಿದರೆ ಗುರುತಿಸುತ್ತೇನೆ ಸಾಕ್ಷಿಯು ಸದರಿ ದಾಖಲೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-8 ಎಂದು ಮತ್ತು ಸಹಿಯನ್ನು 8 ಎ ಎಂದು ಗುರುತಿಸಲಾಯಿತು.

ಪಾಟೀ ಸವಾಲು. ಆರೋಪಿತರ ಪರ ಶ್ರೀ ಎಸ್ ಎಲ್ ಜಿ ವಕೀಲರಿಂದಃ-

ಅವರು ದಿಃ 02-04-2022 ರಂದು ಬೆಳಿಗ್ಗೆ 11 ಗಂಟೆ ಸಮಯದಲ್ಲಿ ಚಿಕಿತ್ಸೆಗಾಗಿ ಬಂದಿದ್ದರು. ನಾನು ಹೇಳುತ್ತಿರುವುದು ಸುಳ್ಳು ಎಂದರೆ ಸರಿಯಲ್ಲ. ಸಾಮಾನ್ಯವಾಗಿ ರೈತರು ಜಮೀನಿನಲ್ಲಿ

ಕೆಲಸ ಮಾಡುವ ಸಮಯದಲ್ಲಿ ಅವರಿಗೆ ಮೈ ಕೈ ನೋವಾಗುತ್ತದೆಂದರೆ ಸರಿ. ನಾನು ಚಾಸಾ-1 ಮತ್ತು 4 ರವರಿಗೆ ಯಾವುದೇ ಚಿಕಿತ್ಸೆ ನೀಡಿಲ್ಲ ತನಿಖಾಧಿಕಾರಿಗೆ ಅನುಕೂಲ ಮಾಡಲು ಸುಳ್ಳು ಪ್ರಮಾಣಪತ್ರವನ್ನು ನೀಡಿರುತ್ತೇನೆಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಃ

(ಮುಕ್ತ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ,

ಸಿವಿಲ್ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ